ವರದಿಯಾಗಿರುತ್ತದೆ ಎಂದು ಹೇಳುತ್ತೀರಿ. ಅಲ್ಲಿ ಸಾಕಷ್ಟು ಕೇಸ್‌ಗಳು ಆಗಿದೆ. ಕೆಎಸ್‌ಆರ್‌ಟಿ ಬಸ್‌ಗೆ ಬೆಂಕಿ ಇಟ್ಟಿದ್ದಾರೆನ್ನುವಂಥಾದ್ದು ಹೇಳಿದ್ದಾರೆ. ನಾನು ಹಿರಿಯ ಅಧಿಕಾರಿಗಳು ಯಾರಿದ್ದಾ ಅವರೆಲ್ಲರನ್ನೂ ಕರೆದು ಮೀಟಿಂಗ್ ಮಾಡುತ್ತೇನೆ. ಈಗ ಮಾನ್ಯ ಸದಸ್ಯರು ಪೋಲೀಸ್ ಠಾಣೆಯಾಗಬೇಕೆಂದು ಏನು ಹೇಳಿದ್ದಾರೆ. ಈ ವರ್ಷದಲ್ಲಿ ಏನಾದರೂ ಆದರೆ ಅವರು ಅಲ್ಲಿ ದಾನಿಗಳಿಂ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದರೆ ನಾಳೆ ಕುಳಿತುಕೊಂಡು ನಾನು ಇದರ ಬಗ್ಗೆ ಏನಾದರ ಒಂದು ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ತಕ್ಷಣ ಕಟ್ಟಡವನ್ನು ಕೊಡುತ್ತೇ ಮತ್ತು ಆ ಠಾಣೆಗೆ ಬೇಕಾದಂತಹ ಜಾಗವನ್ನು ಒದಗಿಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಮೊಕ್ಕಾಪಟ್ಟಣಕ್ಕೆ ಪೋಲೀಸ್ ಠಾಣೆ ಕೊಡಿ ಎಂದು ಕೇಳಿದ್ದೆ. ನಾವೂ ಕೂಡ ಕಟ್ಟಡವನ್ನು ಕೊಡುತ್ತೇವೆ. ನಮಗೂ ಒಂದು ಪೋಲೀಸ್ ಠಾಣೆಯನ್ನು ಕೊಡುತ್ತೀರಾ?

ಶ್ರೀ ಆರ್. ರೋಷನ್‌ಬೇಗ್ : ಪರಿಶೀಲನೆ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿ ವಾಂತಿ, ಭೇದಿ ಮತ್ತು ಕಾಲರ

405 - ಶ್ರೀ ಎನ್. ರಾಜಣ್ಣ, (ಭಾರತಿನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಜನವರಿ 97ರಿಂದ ಜೂನ್ 97ರವರೆಗೆ ಎಷ್ಟು ಜನ ಕರುಳ ಬೇನೆ ಹಾಗೂ ಕಾಲರಾದಿಂದ ನರಳುತ್ತಿರುತ್ತಾರೆ?

ಆ) ಈ ಖಾಯಿಲೆಯಿಂದ ಎಷ್ಟು ಜನ ಮರಣ ಹೊಂದಿರುತ್ತಾರೆ? ಎಷ್ಟು ಜನ ಐಸೋಲೇಷನ್ ಆಸ್ಪತ್ರೆಗೆ ಶುಶ್ರೂಷೆಗಾಗಿ ದಾಖಲಾಗಿರುತ್ತಾರೆ?

ಇ) ಹಾಗಿದ್ದಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯು ಖಾಯಿಲೆಯಿಂದ ಮರಣ ಹೊಂದಿದವರ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೇ?

ಈ) ಈ ಖಾಯಿಲೆಯು ಯಾವ ಕಾರಣದಿಂದ ಹೆಚ್ಚಿನ ಆನಾಹುತವಾಗಬಹುದು?

ಉ) ಈ ರೀತಿ ಖಾಯಿಲೆಯನ್ನು ತಡೆಗಟ್ಟಲು ಸರ್ಕಾರವು : ಬೆಂಗಳೂರು ಮಹಾನಗರ ಪಾಲಿಕೆ ಏನು ಕ್ರಮ ಕೈಗೊಂಡಿದೆ?

ಊ) ವರ್ಷ ಪೂರ್ತಿ ಶಾಶ್ವತವಾಗಿ ಈ ಖಾಯಿಲೆ ಹರಡದಂತೆ ತಡೆಗಟ್ಟಲು ಸರ್ಕಾರವು ಯಾವ ಯೋಜನೆಯನ್ನು ರೂಪಿಸಿದೆ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರ ಅಭಿವೃದ್ಧಿ ಸಚಿವರು) :

ಅ) 2581 ಕರುಳು ಬೇನೆ, ಇವುಗಳಲ್ಲಿ 68 ಕಾಲರಾ.

ಆ) 2581 ಜನ ದಾಖಲಾಗಿ 15 ಮಂದಿ ಮರಣ ಹೊಂದಿರುತ್ತಾರೆ.

ಇ) ಇಲ್ಲ

ಈ) ಇದು ಸೀಮಿತವಾದ ಕಾಲದಲ್ಲಿ ಬರುವ ಖಾಯಿಲೆ

1. ಪರಿಸರ ಮತ್ತು ಮನೆಗಳಲ್ಲಿ ಸ್ವಚ್ಚತೆ ಕಾಪಾಡದೇ ಇರುವ ಸ್ಥಳಗಳಲ್ಲಿ ಮತ್ತು ಸ್ವತಃ ಸ್ವಚ್ಚತೆ ಕಾಪಾಡದೆ ಇರುವುದರಿಂದ.
2. ಕಲುಶಿತ ನೀರು ಸೇವನೆಯಿಂದ.
3. ಮುಚ್ಚಿಟ್ಟಿಲ್ಲದ ಉಪಯೋಗಕ್ಕೆ ಯೋಗ್ಯವಲ್ಲದ ಆಹಾರ ಸೇವನೆಯಿಂದ.
4. ರಸ್ತೆ ಬದಿ ಬೂರಾಟ ಮಾಡುವ ಆಹಾರ ಪದಾರ್ಥಗಳು, ಕತ್ತರಿಸಿದ ಹಣ್ಣು ಹಂಪಲುಗಳು ಮತ್ತು ಬಣ್ಣದ ನೀರು ಇತರೆ ಸೇವೆಯಿಂದ.

ಉ) ಅ) ಆರೋಗ್ಯ ಶಿಕ್ಷಣ ನೀಡುವುದು.

ಆ) ಕುಡಿಯಲು ಯೋಗ್ಯ ನೀರು ಸರಬರಾಜು ಮಾಡುವಂತೆ ಕ್ರಮ ನೀರಿನ-ಮಾದರಿಗಳ ಸಂಗ್ರಹಣೆ ಕಲುಷಿತ : ಸೋರುವಿಕೆ ಕೇಂದ್ರಗಳನ್ನು ಪತ್ತೆ ಹಚ್ಚಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರ ಸಹಯೋಗದೊಂದಿಗೆ ಸರಿಪಡಿಸುವುದು.

ಇ) ರೋಗ ಹರಡಿದವರ ಸಂಬಂಧಿಕರಿಗೆ ಸುತ್ತ ಮುತ್ತಲಿನ ನಿವಾಸಿಗಳಿಗೆ ಔಷದೋಪಚಾರ.

ಈ) ರಸ್ತೆ ಬದಿ ಕತ್ತರಿಸಿ ಮಾರಾಟ ಮಾಡುವ ಹಣ್ಣು ಹಂಪಲುಗಳನ್ನು ಆಹಾರ ಪದಾರ್ಥಗಳನ್ನು ಬಣ್ಣದ ನೀರು ಇತರೆ ಪದಾರ್ಥಗಳನ್ನು ಮುಟ್ಟುಗೋಲು ಹಾಕಿಕೊಂಡು ನಾಶ ಮಾಡುವುದು.

ಉ) ರೋಗ ಹರಡಿದ ಪ್ರದೇಶಗಳಲ್ಲಿ ಸ್ವಚ್ಚತೆಯನ್ನು ತೀವ್ರತರವಾಗಿ ನಿರ್ವಹಿಸಲಾಯಿತು.

ಊ) ರೋಗ ತಗುಲಿದ ಪ್ರದೇಶಗಳನ್ನು ಸತತವಾಗಿ ಗಮನಿಸಿ ರೋಗ ಹರಡದಂತೆ ಹತೋಟಿ ಕ್ರಮ ತೆಗೆದುಕೊಳ್ಳಲಾಯಿತು.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೆ, ಕರುಳುಬೇನೆಯಿಂದ 2581 ಮತ್ತು ಕಾಲರಾದಿಂದ 68ಮಂದಿ ನರಳುತ್ತಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. I must thank our Government and leaders for their effort. 15 ಮಂದಿ ಸತ್ತಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. After all, not even 1%. Because of the effort of our government, we have saved many

people. But still there is reason to setright further. ಕೊಳವೆ ಬಾವಿಯಿಂದ ತೆಗೆದುಕೊಂಡ ನೀರಿನಿಂದ ಎಂದು ಹೇಳಿದ್ದಾರೆ. ಈ ನೀರು ಕಲುಷಿತವಾಗಿ ಈ ಖಾಯಿಲೆ ಬರುತ್ತದೆಯೆ ಅಥವಾ ಬಿ ಡಬ್ಲ್ಯೂ ಎಸ್ ಎಸ್ ಬಿಯವರ ನೀರು ಉಪಯೋಗಿಸುವುದರಿಂದ ಈ ಖಾಯಿಲೆ ಬರುತ್ತದೆಯೇ? ಎರಡನೆಯದಾಗಿ ಜನಸಂಖ್ಯೆ ಒತ್ತಡವಿರುವಂತಹ ಕಡೆ ಕೊಳವೆ ಬಾವಿಗಳನ್ನು ಹಾಕಿದರೆ ಅದರ ಸುತ್ತಲೂ ಕೊಳಕು ನೀರು ನಿಂತುಕೊಂಡು ಆ ನೀರು ಕೊಳವೆ ಬಾವಿಯಲ್ಲಿ ಚೋಕಾಗಿ ನೀರು ಕಲುಷಿತವಾಗುತ್ತದೆಯೇ? ಮೂರನೆಯದಾಗಿ ಕೆಲವು ಕಡೆ ಬಿ ಡಬ್ಲ್ಯೂ ಎಸ್ಎಸ್ ಬಿ ಯವರು ಹಾಕಿರುವ ಪೈಪ್ ಲಿಕೇಜ್ ಆಗುವಂಥಾದ್ದು, ಎಲ್ಲಿ ಜನಸಂಖ್ಯೆ ಜಾಸ್ತಿ ಇದೆ, ಈ ಕೊಳಕು ನೀರು ನಿಂತಿರುವಂತಹ ಕಡೆ ಬಿ ಡಬ್ಲ್ಯೂ ಎಸ್ ಎಸ್ ಬಿ ಯವರು ಕೊಡುವಂತಹ ನೀರು ಬರುವಾಗ ಸರಿಯಾಗಿ ಬರುತ್ತದೆ. ಅದು ನಿಂತು ಹೋದ ಮೇಲೆ ಅದರಲ್ಲಿರುವಂತಹ ಗಾಳಿ ಮೇಲ್ಗಡೆ ಇರುವಂತಹ ಕೊಳಕು ನೀರನ್ನು ಒಳಗಡೆ ಎಳೆದುಕೊಂಡು ಒಂದು ಕಿ.ಮೀ. ವರೆಗೂ ಸಪ್ಲೈ ಮಾಡುತ್ತದೆ. ಅದನ್ನು ಕ್ಲಾರಿಫೈ ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ. We have to set right these things so that even 15 ಜನರು ಸಾಯುವುದಿಲ್ಲ, ಕಾಲರಾ ಬರದ ಹಾಗೆ ಮಾಡಬಹುದೆಂದು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಅನಂತನಾಗ್ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ವಿವರವಾಗಿ ಉತ್ತರದಲ್ಲೇ ಹೇಳಲಾಗಿದೆ. ಹೆಚ್ಚಿಗೆ ಸ್ವಚ್ಛತೆ ಇಲ್ಲದಿರುವುದರಿಂದ ಇದು ಮಾರ್ಚ್, ಏಪ್ರಿಲ್, ಮೇ, ಜೂನ್, ತಿಂಗಳುಗಳಲ್ಲಿ ಈ ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳು ಹರಡುತ್ತದೆ. ಮುಖ್ಯವಾಗಿ ಕೊಳಚೆ ಪ್ರದೇಶಗಳಿರುವಂತಹ ಕಡೆಗಳಲ್ಲಿ, ಹೆಚ್ಚುವರಿ ಜನಸಂಖ್ಯೆ ಇರುವಂತಹ ಕಡೆಗಳಲ್ಲಿ ಈ ರೋಗ ಹರಡುವಂತಹ ಪ್ರದೇಶಗಳಲ್ಲಿ ಸ್ವಚ್ಛತೆ ಕಾರ್ಯ ತೀವ್ರವಾಗಿ ನಿರ್ವಹಿಸಲಾಗುತ್ತಿದೆ. ಅಲ್ಲಿ ಕೆಂದ್ರಗಳನ್ನು ಮಾಡುವಂಥಾದ್ದು, ಮತ್ತಿತರ ಎಲ್ಲಾ ವ್ಯವಸ್ಥೆಗಳನ್ನು ಮಾಡುತ್ತಿದ್ದೇವೆ. ಮತ್ತೆ ಇದರ ಬಗ್ಗೆ ಸಾರ್ವಜನಿಕರಿಗೆ ತಿಳಿಸುವಂಥ ಕಾರ್ಯವನ್ನು ಮಾಡುತ್ತಿದ್ದೇವೆ. ಇದಕ್ಕೆ ಅನೇಕ ಕಾರಣಗಳು ಇದೆ. ಈಗ ದೆಹಲಿಯಲ್ಲಿ ಕೂಡ 'ಡೆಂಗ್ಯೂ ಜ್ವರ' ಇದೇ ಕಾರಣದಿಂದ ಬಂದಿದೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಕೇವಲ 15 ಜನರು ಈ ನಾಲ್ಕು ತಿಂಗಳಲ್ಲಿ ಮೃತಪಟ್ಟಿದ್ದು ಬಹಳ ಕಡಿಮೆ, ತುರ್ತಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. ಹಿಂದಿನ ಸಾರಿ ಸಹ ಅನೇಕ ಮಾನ್ಯ ಸದಸ್ಯರುಗಳು ಈ ವಿಚಾರಗಳನ್ನು ಹೇಳಿದ್ದರು. ಅದಕ್ಕೋಸ್ಕರ ಈ ವಿಷಯವಾಗಿ ಅನುದಾನ ಬೇಡಿಕೆಗಳಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಎಲ್ಲಾ ವಿಚಾರಗಳನ್ನು ಹೇಳುತ್ತೇನೆ. ಏಕೆಂದರೆ ಹಿಂದಿನ ಸಾರಿ ನಾವು ಸೂರತ್, ಅಹಮದಬಾದ್‌ನಲ್ಲಿರುವಂತಹ ರೀತಿಯಲ್ಲೇ ಬೆಂಗಳೂರಿನಲ್ಲಿ ಮಾಡಬೇಕೆಂದು, ಈ ಆಗಸ್ಟ್ ತಿಂಗಳ 18ನೇ ತಾರೀಖಿನಂದು ಅಂದರೆ ಮುಂದಿನ ಸೋಮವಾರದಂದು ಅನೇಕ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಾನು 19,20,21ರಂದು ಅನುದಾನಗಳ ಬೇಡಿಕೆಯ ಮೇಲೆ ಚರ್ಚೆ ಇದ್ದಾಗ ಎಲ್ಲಾ ವಿಚಾರಗಳನ್ನು ವಿವರವಾಗಿ ಮಾನ್ಯ ಸದಸ್ಯರುಗಳಿಗೆ ತಿಳಿಸಿ, ಅವರ ಸಮಸ್ಯೆಗಳು ಏನು ಹೇಳಿದ್ದಾರೆ. ಅದಕ್ಕೆ ನಾನು ಸಮಾಧಾನ ಉತ್ತರವನ್ನು ಕೊಡುತ್ತೇನೆನ್ನುವ ಭರವಸೆಯನ್ನು ತಮ್ಮ ಮೂಲಕ ಕೊಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ರಾಜಣ್ಣನವರೆ, ತಮಗೆ ಮಾನ್ಯ ಮಂತ್ರಿಯವರು ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೆ, ಕರಳು ಬೇನೆ, ಕಾಲರಾ ಬಗ್ಗುತ್ತದೆ. ಮೇಜರ್ ಆಗಿ ಇನ್‌ಟೆಸ್ಟೈನ್ ಯಾರಿಗೆ ವೀಕ್ ಇರುತ್ತದೆಯೋ ಅವರಿಗೆ ಈ ಎರಡು ರೋಗಗಳು ಬರುತ್ತದೆ. ಇನ್‌ಟೆಸ್ಟೈನ್ ಸ್ಟ್ರಾಂಗ್ ಇರುವವರಿಗೆ ಟೈಫಾಯಿಡ್, ಜಾಂಡೀಸ್ ಜಾಸ್ತಿ ಆಗುತ್ತಾ ಇದೆ. ನೀರು ಕಲುಷಿತವಾಗುತ್ತಿದೆ, ಇದರ ಬಗ್ಗೆ ಸಿರೀಯಸ್ ಆಗಿ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅನಂತನಾಗ್: ಮಾನ್ಯ ಉಪಾಧ್ಯಕ್ಷರೆ, ನಾವು ಹೆಲ್ತ್ ಕುರಿತು ಕೆಲಸವು ಕಾರ್ಯಕ್ರಮ ಗಳನ್ನು ಹಾಕಿಕೊಂಡಿದ್ದೇವೆ. ಯಾವೂದಾದರೂ ಕಂಪ್ಲೇಂಟ್ ಬಂದರೆ unswept roads within 24 hours ಕ್ಲೀಯರ್ ಮಾಡಲು ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. uncleared garbage within 24 hours; action against epidemics - 3 days; action against stray dogs and other kinds of menace 2 days; action against people creating nuisance in public places 2 days, public- toilets - 2days and permits for industries - 7 days.... ಈ ರೀತಿಯ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಾನು ಅನುದಾನಗಳ ಬೇಡಿಕೆಯ ಮೇಲೆ ಚರ್ಚೆ ಇದ್ದಾಗ ಎಲ್ಲವನ್ನೂ ತಿಳಿಸುತ್ತೇನೆ. ಆದುದರಿಂದ ತಾವುಗಳೆಲ್ಲಾ ಸಹಕರಿಸಿ ಎಲ್ಲಾ ವಿಚಾರಗಳನ್ನು ತಿಳಿಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಸಾಮಾನ್ಯವಾಗಿ ಕಾಲರಾ ಬರುವಂಥಾದ್ದು ಬೇಸಿಗೆ ಕಾಲದಲ್ಲಿ, ಎಲ್ಲಿ ಕಾಲರಾ ಬಂತು ಎಂದು ಕಂಪ್ಲೇಂಟ್ ಬರುತ್ತದೆಯೋ ಅಲ್ಲಿ ಕಾರ್ಪೊರೇಷನ್‌ನವರು ಟ್ರೀಟ್‌ಮೆಂಟ್ ಕೊಡುವಂಥಾದ್ದನ್ನು ಪ್ರಾರಂಭ ಮಾಡುತ್ತಾರೆ. ಪ್ರತಿ ಸಾರಿ ಬೇಸಿಗೆಯಲ್ಲಿ ಈ ಖಾಯಿಲೆ ಬರುತ್ತದೆಂಬುದು ಕಾರ್ಪೊರೇಷನ್ ಅಧಿಕಾರಿಗಳಿಗೆ ಗೊತ್ತಿರುತ್ತದೆ. ಆದರೆ ಪ್ರೀಕಾಶನ್ ಆಗಿ ಯಾವುದೇ ಆ್ಯಕ್ಷನ್ ತೆಗೆದುಕೊಳ್ಳುವುದಿಲ್ಲ. ಯಾವಾಗ ಜನರು ಬಂದು ಕಂಪ್ಲೇಂಟ್ ಕೊಡುತ್ತಾರೆ. ಆಗ ಅವರು ಕಾರ್ಯಪ್ರವೃತ್ತರಾಗುತ್ತಾರೆ. ಅವರು ಮಾಡುವುದಿಲ್ಲವೆಂದು ನಾನು ಹೇಳುತ್ತಾ ಇಲ್ಲ. ಆದರೆ ಅವರು ಮಾಡುವುದನ್ನು ಮೊದಲೇ ಮಾಡುವಂಥಾದ್ದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಅನಂತನಾಗ್ : ಮಾನ್ಯ ಉಪಾಧ್ಯಕ್ಷರೆ, ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದರಿಂದ ಈಗ ಇರುವಂಥ ಸಮಸ್ಯೆ ಮಂದಿನ ಸಾರಿ ಇರುವುದಿಲ್ಲ. ಸದನದಲ್ಲೂ ಈ ವಿಷಯವನ್ನು ಅನೇಕ ಸದಸ್ಯರುಗಳು ಹೇಳಿದ್ದಾರೆ. ಸೂರತ್, ಅಹಮದಾಬಾದ್‌ನಲ್ಲಿ ಯಾವ ಮಾದರಿಯನ್ನು ಮಾಡಿದ್ದಾರೆ. ಅದೇ ಮಾದರಿಯ ಕಾರ್ಯಕ್ರಮಗಳನ್ನು ನಾವು ಸೋಮವಾರದಿಂದ ಜಾರಿಗೆ ತರುತ್ತಿದ್ದೇವೆ. ಅದು ಜಾರಿಗೆ ಬಂದ ನಂತರ ತಾವೇ ನೋಡುತ್ತೀರಿ. ಈ ಸಮಸ್ಯೆಗಳು ಮತ್ತೆ ಮುಂದೆ ಉದ್ಭವಿಸಲಾರದು. Unless very acute ಸಿಚ್ಯುಯೇಷನ್ ಬಂದ ಹೊರತು

ಆಗಲಾರದೆನ್ನುವುದನ್ನು ನಾನು ಅನುದಾನ ಬೇಡಿಕೆಗಳ ಚರ್ಚೆಯಲ್ಲಿ ಹೇಳುತ್ತೇನೆ.

(ತಡೆಹಿಡಿಯಲಾದ ಪ್ರಶ್ನೆ)

ತುಮಕೂರು ಜಿಲ್ಲೆಯಲ್ಲಿ ಅನಧಿಕೃತ ಸಾಗುವಳಿ ಕುರಿತು

246 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಾದ್ಯಂತ ಮತ್ತು ಕಳ್ಳಂಬೆಳ್ಳ ಕ್ಷೇತ್ರ ವ್ಯಾಪ್ತಿಯಲ್ಲಿ ಅಬಕಾರಿ ಇಲಾಖೆಗೆ ಸೇರಿದ ಜಮೀನಿನಲ್ಲಿ ಅಕ್ರಮವಾಗಿ ಜನರು ಅನೇಕ ವರ್ಷದಿಂದ ಸಾಗುವಳಿ ಮಾಡುತ್ತಿದ್ದು ಇದುವರೆಗೂ ಸಕ್ರಮ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣದ ವಿವರವನ್ನು ನೀಡುವುದು)

ಆ) ಬಂದಿದ್ದಲ್ಲಿ ಸದರಿ ಜಮೀನನ್ನು ಶೀಂದಿವನದಿಂದ ಬಿಡುಗಡೆ ಮಾಡಿ ಕಂದಾಯ ಇಲಾಖೆಯ ಮುಖಾಂತರ ಸಕ್ರಮ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಹೌದು

ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಜನರ ಸಂಖ್ಯೆ		ಕ್ಷೇತ್ರ
1) ಕಳ್ಳಂಬೆಳ್ಳ ಕ್ಷೇತ್ರ	3374	8167 - 23
2) ತುಮಕೂರು ಜಿಲ್ಲೆಯಲ್ಲಿ	7561	21526-00
ಒಟ್ಟು		

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವಾಗಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 3374 ಜನರು ಸಾಗುವಳಿ ಮಾಡುತ್ತಿದ್ದಾರೆ. ಅನಧಿಕೃತವಾಗಿ 8167ಎಕರೆಗಳ ವ್ಯಾಪ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆನ್ನುವಂತಹ ಮಾತನ್ನು ಹೇಳಿದ್ದಾರೆ. ಈಗ ಸರ್ಕಾರದ ಪರಿಶೀಲನೆಯಲ್ಲಿ ಕೂಡ ಇದೆ. ಇದನ್ನು ಬಿಡುಗಡೆ ಮಾಡುವಂಥಾದ್ದಕ್ಕೆ ಕೂಡ ಹೇಳಿದ್ದಾರೆ. ದಯಮಾಡಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅತ್ಯಂತ ವಿನಯಪೂರ್ವಕವಾಗಿ ಸಾಗುವಳಿದಾರರ ಪರವಾಗಿ ವಿನಂತಿ